**ಅಸಲು ದಾವಾ ನಂಃ 11/2015**
**ಪಿ.ಡಬ್ಲ್ಯೂಃ 1,**

**ದಿನಾಂಕ :11-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್. ಪ್ರತಿವಾದಿ ಪರ ವಕೀಲರಿಂದ :**

ನಮ್ಮ ಅಜ್ಜ ಮೀನಪ್ಪ ಇತನನ್ನು ನೋಡಿದ್ದೇನೆ. ಅವರು ನಾನು ಚಿಕ್ಕವಳಿದ್ದಾಗ ತೀರಿ ಹೋಗಿದ್ದಾರೆ. ನನ್ನ ತಂದೆ ಕಾಶೆಪ್ಪ ಇವರು ನಾನು 5-6 ವರ್ಷಗಳಿದ್ದಾಗ ತೀರಿ ಹೋಗಿದ್ದಾರೆ. ಮೊದಲು ನಮ್ಮ ಅಜ್ಜ ತೀರಿ ಹೋದರು ನಂತರ ನಮ್ಮ ತಂದೆ ತೀರಿ ಹೋಗಿದ್ದಾರೆ. ನನ್ನ ತಂದೆ ತೀರಿ ಹೋದಾಗ ನಾನು 6 ವರ್ಷವಳಿದ್ದೆ. ನಮ್ಮ ತಂದೆಗೆ 4 ಜನ ಮಕ್ಕಳು, ನಾನು 3 ನೇ ಮಗಳು. ನನ್ನ ತಂದೆ ತೀರಿ ಹೋದಾಗ 4 ನೇ ವಾದಿ 1 ವರ್ಷದವನಿದ್ದೆ. ನಮ್ಮ ತಂದೆ ಮಧ್ಯಪಾನ ವಸನಿ ಆದ ಕಾರಣ ಆತ ಕುಡಿದು ಮರಣ ಹೊಂದಿದ್ದಾನೆ. ನನ್ನ ಜನ್ನ ದಿನಾಂಕ: 10-11-1997, ನಾನು ಪಿ.ಯು.ಸಿ. ತನಕ ಓದಿದ್ದೇನೆ.

ಸರ್ವೆ ನಂಬರ : 42 ರ ಪಹಣಿ ನನ್ನ ಅಜ್ಜ ಮೀನಪ್ಪನ ಹೆಸರಿನಲ್ಲಿದೆ. ಸ.ನ. 93 ರ ಪಹಣಿ ನನ್ನ ಅಜ್ಜ ಮೀನಪ್ಪನ ಹೆಸರಿನಲ್ಲಿದೆ. 1985 ರಲ್ಲಿ ನಮ್ಮ ಅಜ್ಜ ಮೀನಪ್ಪ ಅವರ ಮಕ್ಕಳಾದ ದೇವಿಂದ್ರಪ ಮತ್ತು ಕಾಶೆಪ್ಪನಿಗೆ ಸ.ನ. 93 ರಲ್ಲಿ ಅರ್ಧ ಅರ್ಧ ಹಿಸ್ಸೆ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ದೇವಿಂದ್ರಪ ಮತ್ತು ಕಾಶೆಪ್ಪ ಇವರ ತನ್ನ ತಂದೆ ಜೊತೆಗೆ ಇರುತ್ತಿರಲಿಲ್ಲಾ ಅವರು ಬೇರೆ ಬೇರೆ ಆಗಿ ತಮ್ಮ ಕುಟುಂಬದ ಜೊತಗೆ ಇರುತ್ತಿದ್ದರು ಎಂದರೆ ಸರಿಯಲ್ಲ . ನಾನು ಹುಟ್ಟಿದಾಗ ದೇವಿಂದ್ರಪ ಮತ್ತು ನನ್ನ ತಂದೆ ಬೇರೆ ಬೇರೆ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ . 1990 ರಲ್ಲಿ ನಮ್ಮ ಅಜ್ಜ ಮೀನಪ್ಪ ಸ.ನ. 93 ರಲ್ಲಿ 1985 ರಲ್ಲಿ ಅವರ ಮಕ್ಕಳಾದ ದೇವಿಂದ್ರಪ ಮತ್ತು ಕಾಶೆಪ್ಪನಿಗೆ ಅರ್ಧ ಅರ್ಧ ಹಿಸ್ಸೆ ಮಾಡಿ ಕೊಟ್ಟಿದ್ದೇನೆ ಎಂದು memorandum partition ನ್ನು ದಿನಾಂಕ: 5-2-1990 ರಂದು ಬರೆದು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಸದರಿ memorandum partition ಪ್ರಕಾರ ನಮ್ಮ ಅಜ್ಜ ಮೀನಪ್ಪ ಆತನ ಮಕ್ಕಳಿಗೆ ಸ.ನ. 93 ರಲ್ಲಿ ಸಮಪಾಲು ನೀಡಿ ಸ.ನ. 42 ರಲ್ಲಿ 1 ಎಕರೆ 15 ಗುಂಟೆ ಜಮೀನನ್ನು ತನ್ನ ನಿರ್ವಹಣೆಗಾಗಿ ಇಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿ ನಮ್ಮ ಅಜ್ಜಿ ಹೆಸರಿನ ಮೇಲೆ ಇಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ಅಜ್ಜ ಹೆಸರಿನಲ್ಲಿದ್ದು ಆತನ ತೀರಿ ಹೋದರು ಸಹ ಆತನ ಹೆಸರಿನಲ್ಲಿದೆ ಎಂದರೆ ಸರಿ. ಸ.ನ. 93 ನ್ನು ನನ್ನ ತಂದೆ ತನ್ನ ಮಧ್ಯಪಾನ ಚಟಕ್ಕಾಗಿ ಮತ್ತು ಆತನ ವೈದಕೀಯ ಖರ್ಚಿನ ಸಲುವಾಗಿ ಸದರಿ

**ಅಸಲು ದಾವಾ ನಂಃ 11/2015**
**ಪಿ.ಡಬ್ಲ್ಯೂಃ 1,**

ಸ.ನ. ನನ್ನು ನಮ್ಮ ಅಜ್ಜ ಮೀನಪ್ಪನಿಗೆ 1990 ರಲ್ಲಿ ಮಾರಾಟ ಮಾಡುವುದಾಗಿ ತಿಳಿಸಿದ್ದನು ಎಂದರೆ ಸರಿಯಲ್ಲ. ನಮ್ಮ ತಂದೆ ಸದರಿ ಸ.ನ. 93 ನ್ನು ಮಾರಾಟ ಮಾಡುದಾಗಿ ಹೇಳಿದ ನಂತರ ನಮ್ಮ ಅಜ್ಜ ಮೀನಪ್ಪ ಬೇರೆಯವರಿಗೆ ಮಾರಾಟ ಮಾಡಬೇಡಾ ಆತನ ಸಹೋದರರಾದ ದೇವಿಂದ್ರಪನಿಗೆ ಮಾರಾಟ ಮಾಡು ಅಂತಾ ಹೇಳಿದಾಗ ನನ್ನ ತಂದೆ ರೂ. 4,125/- ಗೆ ತನ್ನ ಹಿಸ್ಸೆಯನ್ನು ದೇವಿಂದ್ರಪ್ಪನಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ . ನಮ್ಮ ತಂದೆ 1990 ರಲ್ಲಿ ಮಾರಾಟ ಮಾಡಿದ ನಂತರ ದೇವಿಂದ್ರಪ್ಪ ಮತ್ತು ಆತನ ಕುಟುಂಬದವರೇ ಅಂದಿನಿಂದ ಅವರೇ ಸ.ನ. 93 ನ್ನು ಸಾಗುವಳಿ ಮಾಡ ಅವರೇ ಕಬ್ಜಾ ವಹಿವಾಟು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ನಮ್ಮ ತಂದೆ ಸ.ನ. 93 ರ ತನ್ನ ಹಿಸ್ಸೆಯನ್ನು ಮಾರಾಟ ಮಾಡಿ ಸದರಿ ದಾಖಲೆಗೆ ನಮ್ಮ ತಾಯಿ 5 ನೇ ವಾದಿ ಸಹ ತನ್ನ ಹೆಬ್ಬಟ್ಟಿನ ಗುರುತು ಹಾಕಿದ್ದಾರೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹೆಚ್ಚಿನ ಪಾಟಿ ಸವಾಲಿಗಾಗಿ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.